# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-1607/2017

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ:26.3.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೇವನಹಳ್ಳಿ ತಾಲ್ಲೂಕು ಪುರಸಭೆ ವ್ಯಾಪ್ತಿಯಲ್ಲಿ ದೂರುದಾರರು ಮತ್ತು ಡಿವಿ ರಾಜಣ್ಣ ಅವರು ಸರ್ಕಾರಿ ಆಸ್ತಿಯಲ್ಲಿ ಒತ್ತುವರಿ ಮಾಡಿದ್ದು, ಸದರಿ ಆಸ್ತಿಯನ್ನು ಪುನ; ಪುರಸಭೆಯ ವಶಕ್ಕೆ ಪಡೆದುಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡುವ** ಬಗ್ಗೆ.

*******

ಶ್ರೀಮತಿ ಕಾಂತಮ್ಮ, ದೇವನಹಳ್ಳಿಯ ನಿವಾಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮುಖ್ಯಾಧಿಕಾರಿಗಳು, ಪುರಸಭೆ, ದೇವನಹಳ್ಳಿ ಮತ್ತು ಕಂದಾಯ ನಿರೀಕ್ಷಕರು, ಪುರಸಭೆ, ದೇವನಹಳ್ಳಿ, (ಇನ್ನು ಮುಂದೆ ಕ್ರಮವಾಗಿ "1 ಮತ್ತು 2ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ದೇವನಹಳ್ಳಿ ತಾಲ್ಲೂಕು, ದೇವನಹಳ್ಳಿ ಪಟ್ಟಣದ 21ನೇ ವಾರ್ಡಿನ ತಾಲ್ಲೂಕು ಕಚೇರಿ ರಸ್ತೆಯಲ್ಲಿರುವ ಖಾತೆ ನಂ.1911/1773/1534/ಎ ವಿಸ್ತೀರ್ಣ 30*40ಅಡಿಗಳ ಸ್ವತ್ತನ್ನು ದೂರುದಾರರು ಹೊಂದಿದ್ದು, ಆದರೆ ಈ ಸ್ವತ್ತಿನಲ್ಲಿ ಡಿ.ವಿ.ರಾಜಣ್ಣ ಅವರು ಒತ್ತುವರಿಮಾಡಿ ಕಟ್ಟಡ ನಿರ್ಮಿಸಿರುತ್ತಾರೆ. ಈ ಕಟ್ಟಡವನ್ನು ತೆರವುಗೊಳಿಸಲು ಎದುರುದಾರರಿಗೆ ವಿವಿಧ ದಿನಾಂಕಗಳಂದು ಮನವಿ ಸಲ್ಲಿಸಿದರೂ ಸಹಾ ಇವರು ಭ್ರಷ್ಟಾಚಾರದಲ್ಲಿ ತೊಡಗಿ ಡಿ.ವಿ.ರಾಜಣ್ಣ ಅವರ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಟಿಸಿ ದಿ.3.5.2017ರಂದು ದೇವನಹಳ್ಳಿ

ಪುರಸಭೆಯ ಮಹಜರ್ ವರದಿ ಸಿದ್ಧಪಡಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಕ್ರಮಕೈಗೊಂಡು, ತಮಗೆ ನ್ಯಾಯದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿರುತ್ತಾರೆ. ದೂರಿನ ಜೊತೆಗೆ 2 ಗೂಗಲ್ ಫೂಟೇಜ್, 1ನೇ ಎದುರುದಾರರಿಗೆ ದಿ.8.3.2017ರಂದು, 14.3.2017ರಂದು ಒತ್ತುವರಿ ತೆರವುಗೊಳಿಸುವ ಬಗ್ಗೆ ನೀಡಿದ ಅರ್ಜಿಯ ಪ್ರತಿಗಳನ್ನು, ದಿ.20.3.2017ರಂದು ಸರ್ವೆ ಕಾರ್ಯವನ್ನು ನಡೆಸಲು ಪೋಲೀಸ್ ರಕ್ಷಣೆಯನ್ನು ಕೋರಿದ ಅರ್ಜಿಯ ನಕಲು, 1ನೇ ಎದುರುದಾರರು ಸರ್ವೆ ಮಾಡಲು ದಿನಾಂಕ ನಿಗಧಿಪಡಿಸಿದ ಬಗ್ಗೆ ನೀಡಿದ ತಿಳುವಳಿಕೆ ಪತ್ರಗಳ ನಕಲುಗಳನ್ನು, ದಿ.3.5.2017ರಂದು ಜರುಗಿಸಿದ ಮಹಜರ್ ಪ್ರತಿ, ಡಿವಿ ರಾಜಣ್ಣನ ಆಸ್ತಿಯ ಖಾತೆ ನಕಲನ್ನು ಡಿವಿರಾಜಣ್ಣನ ಕ್ರಯಪತ್ರದ ದೃಢೀಕೃತ ನಕಲನ್ನು ದೂರುದಾರರ ಆಸ್ತಿಯ ಕ್ರಯಪತ್ರದ ನಕಲನ್ನು ದೂರುದಾರರ ಆಸ್ತಿಯ ಖಾತೆ ನಕಲು, ಪುರಸಭೆಗೆ ಪಾವತಿಸಿದ ತೆರಿಗೆ ರಸೀದಿಗಳನ್ನು ಹಾಜರುಪಡಿಸಿರುತ್ತಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ದೂರು ಸ್ವೀಕರಿಸಿದ ನಂತರ ದಾಖಲೆಗಳನ್ನು ಪರಿಶೀಲಿಸಿದಾಗ ವೆಂಕಟಪ್ಪ ಬಿನ್ ಹನುಮಂತರಾಯಪ್ಪ ಅವರು ದಿ.7.6.1963ರಂದು ದಾನಪತ್ರದ ಸಂಖ್ಯೆ:559/63-64 ರಂತೆ ತಮ್ಮ ಆಸ್ತಿಯನ್ನು ಎನ್.ಕೃಷ್ಣಪ್ಪ ಅವರಿಗೆ ದಾನವಾಗಿ ನೀಡಿರುತ್ತಾರೆ. ಸದರಿ ದಾನಪತ್ರದಲ್ಲಿ ತಮ್ಮ ಆಸ್ತಿ ಸಂ.1774/1534 ಸಿ- ಅಳತೆಯ ಪೂರ್ವ-ಪಶ್ಚಿಮ 50 ಅಡಿ ಮತ್ತು ಉತ್ತರ ದಕ್ಷಿಣ 25 ಅಡಿಗಳೆಂದು ದಾಖಲಾಗಿರುತ್ತದೆ. ತದನಂತರ ಎನ್.ಕೃಷ್ಣಪ್ಪ ಅವರು ಡಿ.ವಿ.ರಾಜಣ್ಣ ಅವರಿಗೆ ಸದರಿ ಸ್ವತ್ತನ್ನು ಕ್ರಯಪತ್ರ ಸಂ.754/84-85ರಂತೆ ದಿ.21.9.1984ರಂದು ಮಾರಾಟ ಮಾಡಿರುತ್ತಾರೆ. ಕಛೇರಿಯ ದಾಖಲಾತಿಗಳಲ್ಲಿನ ಅಳತೆಯು ಹೆಚ್ಚುವರಿಯಾಗಿದ್ದು, ಮೇಲ್ಕಂಡ ದಾನಪತ್ರದ ಮುಖಾಂತರ ಬಂದಿರುವ ಅಳತೆಯು ಹಾಲಿ ಡಿ.ವಿ.ರಾಜಣ್ಣ ಅವರ ಸ್ಥಳದಲ್ಲಿರುವ ಅಳತೆಗೂ ಒಂದಕ್ಕೊಂದು ತಾಳೆಯಾಗಿರುತ್ತದೆಂದು ತಿಳಿಸಿರುತ್ತಾರೆ. ಪುರಸಭಾ ಕಾರ್ಯಲಯದಲ್ಲಿ ಡಿವಿ.ರಾಜಣ್ಣ ಅವರ ಖಾತೆಯಲ್ಲಿ ಹೆಚ್ಚುವರಿ ಅಳತೆಯನ್ನು ದಾಖಲು ಮಾಡಲಾಗಿದೆ, ಸದರಿಯವರು ತಮ್ಮ ಆಕ್ಷೇಪಣೆಯ ಜೊತೆಗೆ ಮಹಜರ್ ವರದಿಯ ನಕಲನ್ನು ಹಾಜರುಪಡಿಸಿರುತ್ತಾರೆ. ಸದರಿ ಮಹಜರಿನಂತೆ ದೂರುದಾರರ ಮತ್ತು ಡಿವಿ ರಾಜಣ್ಣ ಅವರ ಆಸ್ತಿಗಳನ್ನು ದಿ.3.5.2017ರಂದು ಅಳತೆ ಮಾಡಿದಾಗ ದೂರುದಾರರ ಆಸ್ತಿಯ ಅಳತೆ 40*30 ಅಡಿಗಳಾಗಿದ್ದು, ಆದರೆ ಹಾಲಿ ಸ್ಥಳದಲ್ಲಿ 27.6 * 54 ಅಡಿಗಳಾಗಿರುತ್ತದೆ. ಹಾಲಿ

ಸ್ಥಳದಲ್ಲಿ 24.6*14 ಅಡಿಗಳಷ್ಟು ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಿಕೊಂಡಿರುತ್ತಾರೆ. ಡಿವಿ ರಾಜಣ್ಣ ಅವರ ಆಸ್ತಿಯನ್ನು ಅಳತೆ ಮಾಡಿದಾಗ ಒಟ್ಟು ಅಳತೆ ಪೂ- 75.2 ಪ- 47 ಉತ್ತರದ ಕಡೆ 51 ದಕ್ಷಿಣದ ಕಡೆ 16 ಅಡಿಗಳಲ್ಲಿ ಕಟ್ಟಡವನ್ನು ನಿರ್ಮಿಸಿಕೊಂಡಿರುತ್ತಾರೆ. ದೂರುದಾರರ ಸ್ವತ್ತಿನಲ್ಲಿ 3/4 * 15 ಅಡಿಗಳಷ್ಟು ಜಾಗದಲ್ಲಿ ಡಿವಿ ರಾಜಣ್ಣ ಅವರು ಒತ್ತುವರಿ ಮಾಡಿಕೊಂಡಿರುವುದೆಂದು ತಿಳಿಸಿರುತ್ತಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಪುನರುಚ್ಚರಿಸಿ, ದೂರುದಾರರ ಸ್ವತ್ತಿನ ಅಳತೆಯು 1975-76ನೇ ಸಾಲಿನಿಂದ ಚಾಲ್ತಿ ವರ್ಷದ ವಹಿಯಲ್ಲಿ 30*40 ಅಡಿಗಳಿರುತ್ತವೆ. ಆದರೆ ಸ್ಥಳವನ್ನು ಅಳತೆ ಮಾಡಿದಾಗ 30+24.6/2 * 54 ಅಡಿಗಳಲ್ಲಿ ಕಟ್ಟಡ ನಿರ್ಮಿಸಿಕೊಂಡು 24.6 * 14 ಅಡಿಗಳನ್ನು ಹೆಚ್ಚುವರಿಯಾಗಿ ಸರ್ಕಾರಕ್ಕೆ ಸೇರಬೇಕಾಗಿರುವ ಸ್ವತ್ತಿನಲ್ಲಿ ವಾಣಿಜ್ಯ ಉಪಯೋಗದ ಮಳಿಗೆಗಳನ್ನು ನಿರ್ಮಿಸಿಕೊಂಡಿರುತ್ತಾರೆ. ದೂರುದಾರರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ವಾಣಿಜ್ಯ ಅಂಗಡಿಗಳನ್ನು ನಿರ್ಮಿಸಿರುತ್ತಾರೆ. ಡಿವಿ ರಾಜಣ್ಣ ಅವರು ಕಾಂತಮ್ಮ ಅವರಿಗೆ ಸೇರಿದ ಸ್ವತ್ತಿನಲ್ಲಿ 3/4 * 15 ಅಡಿಗಳನ್ನು ಒತ್ತುವರಿ ಮಾಡಿರುವುದು ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ದೂರುದಾರರ ಸ್ವತ್ತಿನ ಉತ್ತರ ಭಾಗದಲ್ಲಿ ಕನ್ಸರ್ವೆನ್ಸಿ ಜಾಗವಿದ್ದು, ಸದರಿ ಜಾಗದಲ್ಲಿ ಸೆಟ್‌ಬ್ಯಾಕ್ ಪ್ರಕಾರ ಯಾವುದೇ ಅಳತೆಯನ್ನು ಬಿಟ್ಟಿರುವುದಿಲ್ಲ. ಸದರಿಯವರು ಕಾನೂನು ವಿರುದ್ಧವಾಗಿ ಕಟ್ಟಡವನ್ನು ನಿರ್ಮಿಸಿಕೊಂಡಿರುತ್ತಾರೆ. ಡಿವಿ ರಾಜಣ್ಣ ಅವರು ಒಟ್ಟು ಅಳತೆಯು ದಾಖಲಾತಿಯಲ್ಲಿರುವಂತೆ 2784 ಚದರ ಅಡಿಗಳಿರುತ್ತವೆ. ಆದರೆ ಹಾಲಿ ಸ್ಥಳದಲ್ಲಿ ಸ್ವತ್ತಿನ ಅಳತೆಯು 2071.2 ಚದರ ಅಡಿಗಳಲ್ಲಿ, ವಾಣಿಜ್ಯ ಮಳಿಗೆ ನಿರ್ಮಿಸಿರುತ್ತಾರೆ. 2ನೇ ಎದುರುದಾರರು ತಾನು ಯಾರದೇ ಒತ್ತಡಕ್ಕೆ ಮಣಿಯದೆ ಸರ್ಕಾರದ ಸ್ವತ್ತನ್ನು ಒತ್ತುವರಿ ಮಾಡಿರುವುದನ್ನು ಬಹಿರಂಗಪಡಿಸಿದ ಕಾರಣ ತಮ್ಮ ವಿರುದ್ಧ ಈ ಸಂಸ್ಥೆಯಲ್ಲಿ ಸುಳ್ಳು ದೂರು ಹೂಡಿರುತ್ತಾರೆಂದು, ತಾನು ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದೂ, ಸದರಿ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದಾರೆ.

5. 1ನೇ ಎದುರುದಾರರು ತಮ ಆಕ್ಷೇಪಣೆಯ ಜೊತೆಗೆ ಮಹಜರ್ ವರದಿಯ ನಕಲು, ದಿ.22.4.2017ರಂದು ಅಳತೆ ಮಾಡಲು ನಿಗಧಿಪಡಿಸಿದ ಬಗ್ಗೆನೀಡಿದ ನೋಟೀಸ್ ಪ್ರತಿ, ಹಾಜರುಮಾಡಿರುತ್ತಾರೆ.

6. ಈ ಪ್ರಕರಣದಲ್ಲಿ ದಾಖಲಾದ ದೂರು, ಆಕ್ಷೇಪಣೆ, ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು ತಮ್ಮ ಆಸ್ತಿಯ ಖಾತೆ ನಂ. 1911/1773/1534 ಕ್ರಯಪತ್ರದಡಿ ಖರೀದಿಸಿದ್ದು ಕಂಡುಬರುತ್ತದೆ. ಸದರಿ ಕ್ರಯಪತ್ರದಲ್ಲಿ ದೂರುದಾರರು 30*40 ಅಡಿಯ ಆಸ್ತಿಯನ್ನು ಖರೀದಿಸಿರುತ್ತಾರೆಂದು ಕಂಡುಬರುತ್ತದೆ. ಅದೇ ರೀತಿ ಡಿವಿ ರಾಜಣ್ಣ ಅವರು ಆಸ್ತಿ ಖಾತೆ ನಂ.1774/1534 ಕೃಷ್ಣಪ್ಪ ಅವರಿಂದ ದಿ.21.9.1984ರಂದು ಶುದ್ಧ ಕ್ರಯಪತ್ರದಡಿ ಪಡೆದುಕೊಂಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಆಸ್ತಿಯ ವಿಸ್ತೀರ್ಣ ಪೂ.ಪ. 70 ಅಡಿ, ಉ.ದ 30 ಅಡಿ ಎಂದು ನಮೂದಿಸಿರುತ್ತಾರೆ. ಸದರಿ ಕೃಷ್ಣಪ್ಪ ಮೇಲ್ಕಂಡ ಆಸ್ತಿಯನ್ನು ವೆಂಕಟಪ್ಪ ತಂದೆ ಹನುಮಂತರಾಯಪ್ಪ ಎನ್ನುವವರಿಂದ ದಿ.7.6.63ರಂದು ದಾನಪತ್ರದ ಮೂಲಕ ಪಡೆದುಕೊಂಡಿರುತ್ತಾರೆ. ಸದರಿ ದಾನಪತ್ರದಲ್ಲಿ ಆಸ್ತಿಯ ವಿಸ್ತೀರ್ಣ ಪೂ.ಪ.50 ಅಡಿ, ಉ.ದ 25 ಅಡಿ ಎಂದು ನಮೂದಿಸಲಾಗಿದೆ. ದಾನಪತ್ರದಲ್ಲಿ ತಿಳಿಸಿದ ವಿಸ್ತೀರ್ಣಕ್ಕೂ ಮತ್ತು ದಿ.21.9.1984ರಂದು ಡಿವಿ ರಾಜಣ್ಣ ಅವರು ಬರೆಸಿಕೊಂಡ ಕ್ರಯಪತ್ರದಲ್ಲಿ ತಿಳಿಸಿರುವ ವಿಸ್ತೀರ್ಣಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಡಿವಿ ರಾಜಣ್ಣ ಅವರು ತಮ್ಮ ಕ್ರಯಪತ್ರದಲ್ಲಿ ಸುಳ್ಳು ಅಳತೆಯನ್ನು ನಮೂದಿಸಿಕೊಂಡಿರುತ್ತಾರೆ ಮತ್ತು ಅದರಂತೆ ದೇವನಹಳ್ಳಿ ಪುರಸಭೆಯ ಕಛೇರಿಯ ದಾಖಲೆಯಲ್ಲಿ ಸುಳ್ಳು ವಿಸ್ತೀರ್ಣವನ್ನು ದಾಖಲಿಸಿರುತ್ತಾರೆ. ದಾನಪತ್ರದಲ್ಲಿ ತಿಳಿಸಿದ ಅಳತೆಯು ಹಾಲಿ ಸ್ಥಳದಲ್ಲಿರುವ ಡಿವಿ ರಾಜಣ್ಣ ಅವರ ಸ್ವತ್ತಿನ ವಿಸ್ತೀರ್ಣದ ಅಳತೆಯು ಒಂದಕ್ಕೊಂದು ತಾಳೆಯಾಗಿರುತ್ತದೆಂದು 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ಮಹಜರಿನಲ್ಲಿ ಡಿವಿ ರಾಜಣ್ಣ ಅವರು ದೂರುದಾರರ ಆಸ್ತಿಯಲ್ಲಿ 3/4*15 ಅಡಿ ಒತ್ತುವರಿ ಮಾಡಿರುತ್ತಾರಂದು ಹಾಗೂ ಸರ್ಕಾರಕ್ಕೆ ಸೇರಿರುವ ಜಾಗವನ್ನು ಭೂಕಬಳಿಕೆ ಮಾಡಿ ವಾಣಿಜ್ಯ ಕಟ್ಟಡವನ್ನು ಕಟ್ಟಿರುತ್ತಾರೆ.ಮಹಜರ ವರದಿಯ ಪ್ರಕಾರ ದೂರುದಾರರು ಸಹ ಸರ್ಕಾರಿ ಆಸ್ತಿಯಲ್ಲಿ 24.6 * 14 ಅಡಿಗಳಷ್ಟು ಒತ್ತುವರಿ ಮಾಡಿ ವಾಣಿಜ್ಯ ಅಂಗಡಿ ಕಟ್ಟಿದ್ದು ಕಂಡುಬರುತ್ತದೆ. ಅದೇರೀತಿ ಡಿವಿ ರಾಜಣ್ಣ ಅವರು ಸಹ ದೂರುದಾರರ ಆಸ್ತಿಯಲ್ಲಿ 3/4*15 ಅಡಿಗಳಷ್ಟು ಒತ್ತುವರಿ ಮಾಡಿ ವಾಣಿಜ್ಯ ಕಟ್ಟಡವನ್ನು ಕಟ್ಟಿದ್ದು ಕಂಡುಬರುತ್ತದೆ. ಡಿವಿ ರಾಜಣ್ಣ ಅವರು ಪುರಸಭೆಯ ದಾಖಲೆಗಳಲ್ಲಿ ತಮ್ಮ ಆಸ್ತಿಯ ಖಾತೆಯ ಪುಸ್ತಕದಲ್ಲಿ ಹೆಚ್ಚುವರಿ ವಿಸ್ತೀರ್ಣವನ್ನು ಬರೆಸಿಕೊಂಡಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರು ಮತ್ತು ಡಿವಿ ರಾಜಣ್ಣ ಅವರು ತಮ್ಮ ವಾಣಿಜ್ಯ ಕಟ್ಟಡವನ್ನು ಬಹಳ ಹಿಂದೆಯೇ ಕಟ್ಟಿರುತ್ತಾರಂದು ತಿಳಿದುಬರುತ್ತದೆ. ಡಿವಿ ರಾಜಣ್ಣ ಅವರು ಪುರಸಭೆಯ ದಾಖಲೆಗಳಲ್ಲಿ ತಮ್ಮ ಆಸ್ತಿಯ ಖಾತೆಯ ಪುಸ್ತಕದಲ್ಲಿ 1984ರಿಂದಲೇ ಹೆಚ್ಚುವರಿ ವಿಸ್ತೀರ್ಣವನ್ನು ಬರೆಸಿಕೊಂಡಿರುತ್ತಾರೆಂದು ತಿಳಿದುಬರುತ್ತದೆ. ಸದರಿ ಸುಳ್ಳು ವಿಸ್ತೀರ್ಣವನ್ನು

ಯಾರು ಮಾಡಿರುತ್ತಾರೆಂದು ತಿಳಿದುಬರುವುದಿಲ್ಲ. ಎದುರುದಾರರು ಸದರಿ ವಿಸ್ತೀರ್ಣವನ್ನು ಪುರಸಭೆಯ ದಾಖಲೆಯಲ್ಲಿ ನಮೂದಿಸಿರುವುದಿಲ್ಲ. ಆದರೆ ದೂರುದಾರರು ದೂರು ದಾಖಲಿಸಿದ ನಂತರ ಎದುರುದಾರರು 2 ಆಸ್ತಿಗಳನ್ನು ಅಳತೆ ಮಾಡಿ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೇವನಹಳ್ಳಿ ತಾಲ್ಲೂಕು ಪುರಸಭೆ ವ್ಯಾಪ್ತಿಯಲ್ಲಿ ದೂರುದಾರರು ಮತ್ತು ಡಿವಿ ರಾಜಣ್ಣ ಅವರು ಸರ್ಕಾರಿ ಆಸ್ತಿಯಲ್ಲಿ ಒತ್ತುವರಿ ಮಾಡಿದ್ದು, ಸದರಿ ಆಸ್ತಿಯನ್ನು ಪುನ; ಪುರಸಭೆಯ ವಶಕ್ಕೆ ಪಡೆದುಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 26/3

26/3/18

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.